# ಪಿಎಸ್‌ಐ ನೇಮಕಾತಿ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆ-2003

## ಪ್ರಬಂಧ ಮತ್ತು ಭಾಷಾಂತರ

ಸಮಯ : 90 ನಿಮಿಷಗಳು | ಅಂಕಗಳು:50

1. ಕೆಳಕಂಡ ಯಾವುದಾದರೂ ಒಂದು ವಿಷಯದ ಬಗ್ಗೆ ಐದು ಪುಟಗಳು ಅಥವಾ 1000 ಪದಗಳಿಗೆ ಮೀರದಂತೆ ಪ್ರಬಂಧ ಬರೆಯಿರಿ.

   ಎ. ಕೋಮುವಾದಕ್ಕೆ ಮಾನವತಾವಾದ ಉತ್ತರವಾದೀತೆ?

   ಬಿ. ಆಡಳಿತವನ್ನು ಜನಪರಗೊಳಿಸುವುದು ಹೇಗೆ?

   ಸಿ. ಮಾಹಿತಿ ತಂತ್ರಜ್ಞಾನ ಭಾರತದ ಅಭಿವೃದ್ಧಿಗೆ ಏಕಮಾತ್ರ ಮಾರ್ಗವೇ?

   ಡಿ. ಕಾವೇರಿ ಜಲ ವಿವಾದ ಸಮಸ್ಯೆಯ ಸ್ವರೂಪ ಹಾಗೂ ಪರಿಹಾರ.

   ಇ. ಸಿನಿಮಾ ಕೇವಲ 'ಸಮೂಹ ಮಾಧ್ಯ'ವೇ ಹೊರತು ಕಲೆಯಲ್ಲ.

   ಎಫ್. ಭಾರತೀಯ ತತ್ವಶಾಸ್ತ್ರದಲ್ಲಿ ನಿರೀಶ್ವರವಾದ.

2. ಈ ಕೆಳಗಿನ ಕಂಡಿಕೆಯನ್ನು ಕನ್ನಡದಿಂದ ಆಂಗ್ಲ ಭಾಷೆಗೆ ಭಾಷಾಂತರಿಸಿ.

   ಅಪರಾಧ, ಆಪಾದನೆ, ಗಿಪಾದಿತ ಮತ್ತು ಅಪರಾಧಿ ಎಂಬ ಮಾತುಗಳು ಸಾಮಾನ್ಯರ ಜೀವನದಲ್ಲಿ ತಲ್ಲಣ ಹುಟ್ಟಿಸುವಂಥವು. ಪ್ರತಿಯೊಬ್ಬ ಅಪರಾಧಿಯೂ ತಾನು ಎಸಗುವ ಅಪರಾಧಕ್ಕೆ ಶಿಕ್ಷೆ ಕಾದಿದೆ ಎಂದು ತಿಳಿದಿದ್ದರೂ ಅಪರಾಧ ಎಸಗುತ್ತಾನೆ. ಮನುಷ್ಯನ ಈ ವಿಚಿತ್ರ ಸ್ವಭಾವವನ್ನು ಕಂಡು ಬೆರಗಾಗುತ್ತದೆ. ಯಾವುದೋ ಒಂದು ಗಳಿಗೆಯ ಆಮಿಷ, ಸುಖ, ದ್ವೇಷ ಮತ್ತು ಹಠಗಳಿಗೆ ಮನಸ್ಸು ಕೊಟ್ಟು ಮಾಡುವ ಅಪರಾಧ ಅಥವಾ ತಪ್ಪು ಆಯಾ ವ್ಯಕ್ತಿಗಳ ಇಡೀ ಬದುಕನ್ನೇ ನರಕವಾಗಿಸಿಬಿಡುತ್ತದೆ. ಅಪರಾಧ ಮಾಡುವಾಗಿನ ಧೈರ್ಯ ಮತ್ತು ವಿಶ್ವಾಸ ಅಪರಾಧ ಮಾಡಿದ ನಂತರ ಕುಗ್ಗಿ ನೆರಳುಗಳಿದ್ದಂತೆ ಬಿಡುತ್ತದೆ. ಅಪರಾಧ ಮತ್ತು ಶೋಧ ಎರಡೂ ಮನುಷ್ಯನ ದೇಹ ಮತ್ತು ಮಟಮಟ ಮಧ್ಯಾಹ್ನ ದೇಹ ಮತ್ತು ನೆರಳುಗಳು ಒಂದಾಗಿ ಗಲಿಬಿಲಿ ಹುಟ್ಟಿಸಿದರೂ ನೆರಳು ನಿಧಾನವಾಗಿ ಬೀಳುತ್ತಾ ಹೋಗುತ್ತದೆ. ಪ್ರತಿಯೊಬ್ಬ ಅಪರಾಧಿಯೂ ತನಗರಿಯದಂತೆ ತಾನು ಮಾಡಿದ ಅಪರಾಧದ ಬಗ್ಗೆ ಕುರುಹುಗಳನ್ನು ಬಿಟ್ಟು ಹೋಗಿರುತ್ತಾನೆ. ತನಿಖೆಯ ಅಸ್ಪಷ್ಟ ಜಾಡಿನಲ್ಲಿ ಸಿಗುವ ಈ ರೀತಿಯ ಒಂದು ಕುರುಹು ದಕ್ಷ ಅಧಿಕಾರಿಗೆ ಬೆಳಕಿನ ಎಳೆಗಳಿದ್ದಂತೆ.

   ನಾವು ತೆಗೆದುಕೊಂಡು ಹೋಗುವ ತಕರಾರುಗಳನ್ನೆಲ್ಲಾ ಪೊಲೀಸರು ನಮ್ಮ ಹಿತಕ್ಕೆ ತಕ್ಕಂತೆ ಬಗೆಹರಿಸಬೇಕೆಂಬ ಇರಾದೆ ನಮ್ಮಲ್ಲಿ ಇರುತ್ತದೆ. ಆದರೆ ಅವರು ಮುಂದೆ ಒಡ್ಡುವ ತಕರಾರಿನಾಚೆ ಒಂದು ನೆಮ್ಮದಿಯ ಸತ್ಯ ಅಡಗಿರುತ್ತದೆಂಬ ಅಂಶವನ್ನು ಅರ್ಥ ಮಾಡಿಕೊಳ್ಳುವ ತಾಳ್ಮೆ ಇರುವುದಿಲ್ಲ. ಎಲ್ಲವೂ ಕಲುಷಿತ ವಾತಾವರಣವನ್ನು ತಲುಪುವ ಈ ದಿನಗಳಲ್ಲಿ ನಿರ್ಣಾಯಕ ಘಟ್ಟದಲ್ಲಿ ಒಬ್ಬ ಪೊಲೀಸ್ ಅಧಿಕಾರಿ, ಒಬ್ಬ ಹಿರಿಯ, ಒಬ್ಬ ಮುಂದಾಳು ನೀಡಬಹುದಾದ ಯೋಗ್ಯ ಸಹಾಯ ಹಸ್ತ ಮತ್ತೆ ಬದುಕಿಗೆ ಆರೋಗ್ಯಕರ ಸ್ಥಿತಿಯನ್ನು ತಂದುಕೊಡುತ್ತದೆ.

3. ಈ ಕೆಳಗಿನ ಕಂಡಿಕೆಯನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಿ.

   What is really desired, under the name of riches is, essentially, power over men; in its simplest sense, the power of obtaining for our own advantage the labour or servant, tradesman and artist. And this power of wealth of course is greater or less in direct proportion to the proverty of the number of persons who are as rich as ourselves, and who are ready to give the poor, he will sing for small pay, as long as there is onlyy one person who can pay him; but if there be two or three, he will sing for the one who offeres him most. So that the art of be coming 'rich' in the common sense is not only the art of accumulation much money for ourselves but also of contriving that our neighbors shall have less. In accurate terms it is the art of establishing the maximum inequality in our own favour.

# ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ (ವಿಶೇಷ)ನೇಮಕಾತಿ – 2003

**ಸಮಯ : 90 ನಿಮಿಷ** | **ಲಿಖಿತ ಪ್ರಶ್ನೆಪತ್ರಿಕೆ** | **ಅಂಕಗಳು : 25+75**

1. ಈ ಕೆಳಗಿನವುಗಳಲ್ಲಿ ಮೂಲ ಕರ್ತೃವು ಯಾವುದು?
   ಎ) ಮಾಣಿಕ್ಯ ಬಿ) ನೀಲಮಣಿ
   ಸಿ) ಪಚ್ಚೆ ಡಿ) ವಜ್ರ
2. ಇದರ ಮೂಲಕ ಹಾಯುವಾಗ ಬೆಳಕಿನ ವೇಗವು ಕನಿಷ್ಠ ಮಿತಿಯಲ್ಲಿರುತ್ತದೆ
   ಎ) ಗಾಜು ಬಿ) ನಿರ್ವಾತ ಪ್ರದೇಶ
   ಸಿ) ನೀರು ಡಿ) ಗಾಳಿ
3. 1969ರಲ್ಲಿ ಚಂದ್ರನ ಮೇಲೆ ಹೆಜ್ಜೆ ಇಟ್ಟ ಮೊಟ್ಟಮೊದಲ ವ್ಯಕ್ತಿ
   ಎ) ನೀಲ್ ಆರ್ಮ್‌ಸ್ಟ್ರಾಂಗ್
   ಬಿ) ಎಡ್ವಿನ್ ಆಲ್‌ಡ್ರಿನ್
   ಸಿ) ಚಾರ್ಲಸ್ ಕಾನ್‌ಡಾರ್
   ಡಿ) ಯೂರಿ ಗಗಾರಿನ್
4. ಮೊಟ್ಟಮೊದಲ ಅಣುಬಾಂಬು ಸಿಡಿದದ್ದು
   ಎ) 1946 ಬಿ) 1945
   ಸಿ) 1948 ಡಿ) 1944
5. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಪಕ್ಷವು 'ಭಾರತ ಬಿಟ್ಟು ತೊಲಗಿ' ಚಳುವಳಿಯನ್ನು ಈ ವರ್ಷ ಪ್ರಾರಂಭಿಸಿತು
   ಎ) 1938 ಬಿ) 1942
   ಸಿ) 1943 ಡಿ) 1944
6. ಗೋವಾ ಸ್ವಾತಂತ್ರ್ಯ ಪಡೆದ ದಿನಾಂಕ
   ಎ) 16-9-1988 ಬಿ) 16-10-1959
   ಸಿ) 26-1-1948 ಡಿ) 18-12-1961
7. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಇದಕ್ಕಾಗಿ ಕೊಡಲಾಗುತ್ತದೆ
   ಎ) ರಾಷ್ಟ್ರದ ಭಾವೈಕ್ಯತೆ
   ಬಿ) ವಿಜ್ಞಾನವನ್ನು ಜನಪ್ರಿಯಗೊಳಿಸುವಿಕೆ
   ಸಿ) ಭಾರತೀಯ ಚಲನಚಿತ್ರ ಕ್ಷೇತ್ರಕ್ಕೆ ಕೊಡುಗೆ
   ಡಿ) ಇದ್ಯಾವುದೂ ಅಲ್ಲ
8. ರಷ್ಯಾ ಕ್ರಾಂತಿ ನಡೆದದ್ದು ಈ ವರ್ಷ
   ಎ) 1913 ಬಿ) 1912
   ಸಿ) 1916 ಡಿ) 1917
9. ಈತನ ಆಳ್ವಿಕೆಯ ಕಾಲದಲ್ಲಿ ಮೆಗಸ್ತನೀಸನು ಭಾರತದಲ್ಲಿ ಪ್ರವಾಸ ಮಾಡಿದನು?
   ಎ) ಅಶೋಕ ಬಿ) ಸಮುದ್ರ ಗುಪ್ತ
   ಸಿ) ಹರ್ಷವರ್ಧನ ಡಿ) ಪುಲಕೇಶಿ
10. ಗೌತಮ ಬುದ್ಧನು ಹುಟ್ಟಿದ ಸ್ಥಳ
    ಎ) ಬೋಧಗಯ ಬಿ) ಕುಶೀನಗರ
    ಸಿ) ಲುಂಬಿಣಿ ಡಿ) ರಾಜಗೃಹ
11. 1771ರಲ್ಲಿ ಇರುವ ಮೈಸೂರು ಹೈದರ್ ಆಲಿಯ ಮೇಲೆ ದಾಳಿ ಮಾಡಿದರು
    ಎ) ಫ್ರೆಂಚರು ಬಿ) ಮರಾಠರು
    ಸಿ) ನಿಜಾಮರು ಡಿ) ಬ್ರಿಟೀಷರು
12. 'ಇಂಕ್ವಿಲಾಬ್ ಜಿಂದಾಬಾದ್' ಘೋಷಣೆಯನ್ನು ರಚಿಸಿದವರು
    ಎ) ಸುಭಾಷಚಂದ್ರ ಬೋಸ್
    ಬಿ) ಹೇಮಚಂದ್ರದಾಸ್
    ಸಿ) ಇಕ್‌ಬಾಲ್
    ಡಿ) ಭಗತ್‌ಸಿಂಗ್
13. ಭಾರತದ ಹೆಚ್ಚಿನ ಏಲಕ್ಕಿಯು ಇಲ್ಲಿ ಬೆಳೆಯುತ್ತದೆ
    ಎ) ಬಿಹಾರ ಬಿ) ಒರಿಸ್ಸ
    ಸಿ) ಹಿಮಾಚಲ ಪ್ರದೇಶ ಡಿ) ಕರ್ನಾಟಕ
14. ಚಾಣಕ್ಯನನ್ನು ಈ ಹೆಸರಿನಿಂದಲೂ ಕರೆಯಲಾಗುತ್ತಿತ್ತು
    ಎ) ವಿಷ್ಣುಭುಜ ಬಿ) ವಿಷ್ಣುಗುಪ್ತ
    ಸಿ) ವಿಷ್ಣುಕರ್ಮ ಡಿ) ವಿಷ್ಣುಶರ್ಮ
15. ವಿಶ್ವದ ಅತಿ ಸಣ್ಣ ದೇಶವು
    ಎ) ಮೊರಾಕ್ಕೋ ಬಿ) ವ್ಯಾಟಿಕನ್ ನಗರ
    ಸಿ) ಮಾಲ್ಟಾ ಡಿ) ನಾರು

16. ಸತಿ ಪದ್ಧತಿಯ ನಿರ್ಮೂಲನೆಗಾಗಿ ಹೋರಾಡಿದ ಭಾರತದ ನಾಯಕ

ಎ) ರಾಧಾಕಾಂತ ದೇವ್

ಬಿ) ದೇವೇಂದ್ರ ನಾಥ ಠಾಕೂರ್

ಸಿ) ಕೇಶವಚಂದ್ರ ಸೇನ್

ಡಿ) ರಾಜಾರಾಂಮೋಹನ್ ರಾಯ್

17. ಸೂರ್ಯಕಿರಣಗಳಿಂದ ಈ ವಿಟಮಿನ್ ದೊರೆಯುತ್ತದೆ

ಎ) ಎ ಬಿ) ಬಿ

ಸಿ) ಸಿ ಡಿ) ಡಿ

18. ಮೊಟ್ಟಮೊದಲ ಬಾರಿಗೆ ಬಾಹ್ಯಾಕಾಶ ಪ್ರವೇಶಿಸಿದ ಭಾರತದಲ್ಲಿ ಜನ್ಮತಾಳಿದ ಮಹಿಳೆ

ಎ) ಅಲ್ಪನಾ ಚಾವ್ಲ ಬಿ) ಬಚೇಂದ್ರಿಪಾಲ್

ಸಿ) ಕಲ್ಪನಾ ಚಾವ್ಲ ಡಿ) ಅಲ್ಪನಾ ಖೋಸ್ಲ

19. ಇದು ಅತ್ಯಂತ ಶೌರ್ಯ ಪ್ರಶಸ್ತಿ

ಎ) ಮಹಾವೀರ ಚಕ್ರ ಬಿ) ಪರಮವೀರ ಚಕ್ರ

ಸಿ) ಅಶೋಕ ಚಕ್ರ ಡಿ) ಇದ್ಯಾವುದೂ ಅಲ್ಲ

20. ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಗಡಿಯನ್ನು ಗುರುತಿಸುವ ರೇಖೆ

ಎ) ಡ್ಯುರಂಡ್ ರೇಖೆ

ಬಿ) ಮೇಕ್ ಮೋಹನ್ ರೇಖೆ

ಸಿ) ರ್‍ಯಾಡ್ ಕ್ಲಿಪ್ ರೇಖೆ

ಡಿ) ಮ್ಯಾಗಿನಾಟ್ ರೇಖೆ

21. ಭಾರತದ ಸುಪ್ರೀಂಕೋರ್ಟ್ ನ್ಯಾಯಾಧೀಶರ ನಿವೃತ್ತಿ ವಯೋಮಿತಿ ಇದಾಗಿದೆ

ಎ) 60 ವರ್ಷಗಳು ಬಿ) 62 ವರ್ಷಗಳು

ಸಿ) 65 ವರ್ಷಗಳು ಡಿ) 58 ವರ್ಷಗಳು

22. ಭಾರತದ ಷೇರು ಪೇಟೆ ಇಲ್ಲಿದೆ

ಎ) ದೆಹಲಿ ಬಿ) ಬೆಂಗಳೂರು

ಸಿ) ಮುಂಬಯಿ ಡಿ) ಚೆನ್ನೈ

23. 'ದಿ ಹಾಲ್ ಆಫ್ ಫೇಮ್' ಇದಕ್ಕೆ ಸಂಬಂಧಿಸಿದ್ದು

ಎ) ಕ್ರಿಕೆಟ್ ಬಿ) ಫುಟ್‌ಬಾಲ್

ಸಿ) ಹಾಕಿ ಡಿ) ಟೆನ್ನಿಸ್

24. ರಾಜ್ಯಸಭಾ ಸದಸ್ಯರು ಕನಿಷ್ಠ ಇಷ್ಟು ವಯಸ್ಸಿನವರಾಗಿರಬೇಕು

ಎ) 21 ವರ್ಷಗಳು ಬಿ) 25 ವರ್ಷಗಳು

ಸಿ) 30 ವರ್ಷಗಳು ಡಿ) 35 ವರ್ಷಗಳು

25. ಮೂಲಭೂತ ಹಕ್ಕುಗಳನ್ನು ಈ ಸಂದರ್ಭದಲ್ಲಿ ಸ್ಥಗಿತಗೊಳಿಸಬಹುದಾಗಿದೆ

ಎ) ಸಾಮಾನ್ಯ ಚುನಾವಣೆಗೆ

ಬಿ) ರಾಷ್ಟ್ರೀಯ ತುರ್ತು ಪರಿಸ್ಥಿತಿ

ಸಿ) ಎಲ್ಲಾ ರೀತಿಯ ತುರ್ತು ಪರಿಸ್ಥಿತಿ

ಡಿ) ಮೇಲಿನ ಎಲ್ಲಾ ರೀತಿಯ ಪರಿಸ್ಥಿತಿ

26. ಸಂವಿಧಾನದ ಯಾವ ಅನುಚ್ಛೇದ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನದ ಬಗ್ಗೆ ಹೇಳುತ್ತದೆ?

ಎ) 356 ಬಿ) 368

ಸಿ) 372 ಡಿ) 370

27. ಭಾರತದ ಅತಿ ದೊಡ್ಡ ಅಣೆಕಟ್ಟು

ಎ) ಭಾಕ್ರಾ ಅಣೆಕಟ್ಟು

ಬಿ) ಹಿರಾಕುಡ್ ಅಣೆಕಟ್ಟು

ಸಿ) ಕೋಶಿ ಅಣೆಕಟ್ಟು

ಡಿ) ದಾಮೋದರ್ ಕಣಿವೆ ಅಣೆಕಟ್ಟು

28. ಲೋಕಸಭೆಯ ಮೊದಲ ಅಧ್ಯಕ್ಷರು ಇವರಾಗಿದ್ದರು

ಎ) ಗಣೇಶ ಎಸ್. ಮಾಳವಂಕರ

ಬಿ) ಡಾ. ರಾಜೇಂದ್ರ ಪ್ರಸಾದ್

ಸಿ) ಲಾಲ್ ಬಹದ್ದೂರ್ ಶಾಸ್ತ್ರಿ

ಡಿ) ಬಾಬು ಜಗಜೀವನರಾವ್

29. ರಾಜ್ಯಪಾಲರ ಸೇವಾ ಅವಧಿಯು

ಎ) 3 ವರ್ಷಗಳು ಬಿ) 4 ವರ್ಷಗಳು

ಸಿ) 5 ವರ್ಷಗಳು ಡಿ) 6 ವರ್ಷಗಳು

30. 'ಆನಂದ ಮಠ' ಪುಸ್ತಕದ ಲೇಖಕರು ಯಾರು?

ಎ) ಬಂಕಿಮ್ ಚಂದ್ರ ಚಟರ್ಜಿ

ಬಿ) ರವೀಂದ್ರನಾಥ ಠಾಕೂರ್

ಸಿ) ಮುಲ್ಕರಾಜ್ ಆನಂದ್

ಡಿ) ಆರ್.ಕೆ. ನಾರಾಯಣ್

31. ಪೆನ್ಸಿಲಿನ್ ಔಷಧಿಯನ್ನು ಕಂಡು ಹಿಡಿದವರು

ಎ) ಲೂಯಿ ಪಾಶ್ಚರ್ ಬಿ) ಅಲೆಕ್ಸಾಂಡರ್ ಫ್ಲೆಮಿಂಗ್

ಸಿ) ರಾಬರ್ಟ್‌ಕೋಚ್ ಡಿ) ಇವರ್‍ಯಾರೂ ಅಲ್ಲ

32. ಒಂದು ರೈಲು ಬಂಡಿಯು 10 ಕಿ.ಮೀ. ದೂರವನ್ನು 15 ನಿಮಿಷಗಳಲ್ಲಿ ಕ್ರಮಿಸಿದಾಗ, ಅದರ ವೇಗವೇನು?

ಎ) ಗಂಟೆಗೆ 40 ಕಿ.ಮೀ ಬಿ) ಗಂಟೆಗೆ 30 ಕಿ.ಮೀ

ಸಿ) ಗಂಟೆಗೆ 20.ಕಿ.ಮೀ ಡಿ) ಗಂಟೆಗೆ 60 ಕಿ.ಮೀ

33. 'ಅ' ಎಂಬುವನು ಒಂದು ಕೆಲಸವನ್ನು 6 ದಿವಸಗಳಲ್ಲಿ ಮಾಡಬಲ್ಲ, ಅದೇ ಕೆಲಸವನ್ನು 'ಬ' ಎಂಬುವನು 12 ದಿನಗಳಲ್ಲಿ ಮಾಡಬಲ್ಲ. ಇಬ್ಬರೂ ಒಟ್ಟಿಗೆ ಆ ಕೆಲಸವನ್ನು ಮಾಡಿದರೆ ಕೆಲಸವನ್ನು ಎಷ್ಟು ದಿನಗಳಲ್ಲಿ ಮುಗಿಸಬಲ್ಲರು?

ಎ) ಮೂರು ದಿನಗಳು ಬಿ) ಎರಡು ದಿನಗಳು

ಸಿ) ನಾಲ್ಕು ದಿನಗಳು ಡಿ) ಒಂದು ದಿನ

34. ಒಂದು ಹಳ್ಳಿಯ ಜನಸಂಖ್ಯೆ ಈಗ 8,000ವಿದೆ. ಮತ್ತು ಜನಸಂಖ್ಯೆಯ 5% ಪ್ರಕಾರ ಹೆಚ್ಚುತ್ತದೆ. ಮೂರು ವರ್ಷಗಳ ನಂತರ ಹಳ್ಳಿಯ ಜನಸಂಖ್ಯೆ ಎಷ್ಟು?

ಎ) 9,000 ಬಿ) 9,216

ಸಿ) 10,000 ಡಿ) 8,220

35. ಅಕ್ಬರ್ ಹುಟ್ಟಿದ ಸ್ಥಳ ಯಾವುದು?

ಎ) ದೆಹಲಿ ಬಿ) ಆಗ್ರ

ಸಿ) ಅಮರ್ ಕೋಟೆ ಡಿ) ಕನುಜ್

36. ತೋಡರು (ಗಿರಿಜನರು) ಇಲ್ಲಿರುತ್ತಾರೆ

ಎ) ನೀಲಗಿರಿ ಬೆಟ್ಟಗಳು ಬಿ) ಡಾಲ್ಮಾ ಬೆಟ್ಟಗಳು

ಸಿ) ಕಚ್ಚ್ ಡಿ) ನೇಪಾಳ

37. ಅರಾಬಿಕಾ ಮತ್ತು ರೊಬಸ್ಟೊ ಇದರ ಮುಖ್ಯ ವೈವಿಧ್ಯಗಳು

ಎ) ಟೀ ಬಿ) ಹತ್ತಿ

ಸಿ) ರೇಷ್ಮೆ ಡಿ) ಕಾಫಿ

38. ಸ್ವಾತಂತ್ರ್ಯೋತ್ತರ ಮೈಸೂರು ರಾಜ್ಯದ ಮೊದಲ ಮುಖ್ಯ ಮಂತ್ರಿ ಯಾರು?

ಎ) ಕೆ.ಸಿ.ರೆಡ್ಡಿ

ಬಿ) ಎಸ್. ನಿಜಲಿಂಗಪ್ಪ

ಸಿ) ಕೆಂಗಲ್ ಹನುಮಂತಯ್ಯ

ಡಿ) ವೀರೇಂದ್ರ ಪಾಟೀಲ್

39. ವಿಶ್ವದಲ್ಲಿ ಯಾವುದೇ ಒಂದು ರಾಷ್ಟ್ರದ ಮೊಟ್ಟಮೊದಲ ಮಹಿಳಾ ಪ್ರಧಾನಮಂತ್ರಿ ಯಾರು?

ಎ) ಶ್ರೀಮತಿ ಇಂದಿರಾಗಾಂಧಿ

ಬಿ) ಶ್ರೀಮತಿ ಸಿರಿಮಾವೋ ಬಂಡಾರ ನಾಯಕೆ

ಸಿ) ಶ್ರೀಮತಿ ಗೋಲ್ಡಮೆಯಿರ್

ಡಿ) ಇವರಾರೂ ಅಲ್ಲ

40. ಲಿಬ್ಯಾಡ ರಾಜಧಾನಿ

ಎ) ಬೆಲ್‌ಗ್ರೇಡ್ ಬಿ) ಹೂರೋನಾ

ಸಿ) ಕೊನ್ಯಾಲಾ ಡಿ) ಟ್ರಿಪೋಲಿ

41. 'ಟಕಾ' ಈ ರಾಷ್ಟ್ರದ ನಾಣ್ಯ

ಎ) ಜಪಾನ್ ಬಿ) ಬಾಂಗ್ಲಾದೇಶ

ಸಿ) ಮೈನ್‌ಮಾರ್ ಡಿ) ಪಾಕಿಸ್ತಾನ

42. ಪೆನ್ಸಿಲಿನ್‌ನ್ನು ಭಾರತಕ್ಕೆ ಪರಿಚಯಿಸಿದವರು

ಎ) ಡಚ್ಚರು ಬಿ) ಇಂಗ್ಲಿಷರು

ಸಿ) ಟರ್ಕರು ಡಿ) ಪೋರ್ಚುಗೀಸರು

43. ಮಹಾತ್ಮಾಗಾಂಧಿಯವರ ರಾಜಕೀಯ ಗುರು ಯಾರು?

ಎ) ಟಾಲ್‌ಸ್ಟಾಯ್ ಬಿ) ಗೋಖಲೆ

ಸಿ) ರಾನಡೆ ಡಿ) ತಿಲಕ್

44. ಭಾರತದ ಸಶಸ್ತ್ರ ಪಡೆಗಳ ಸರ್ವೋಚ್ಛ ದಂಡನಾಯಕ

ಎ) ಫೀಲ್ಡ್ ಮಾರ್ಷಲ್

ಬಿ) ಸೇನೆಯ ಮುಖ್ಯಾಧಿಕಾರಿ

ಸಿ) ರಾಷ್ಟ್ರಪತಿಗಳು

ಡಿ) ಪ್ರಧಾನ ಮಂತ್ರಿಗಳು

45. ಸಿಖ್ಖರ ಧರ್ಮಗ್ರಂಥ ಯಾವುದು?

ಎ) ಗ್ರಂಥ ಸಾಹಿಬ್

ಬಿ) ಆನಂದಪುರ್ ಸಾಹಿಬ್

ಸಿ) ಜಿಯೋನ್

ಡಿ) ಮೇಲಿನ ಯಾವುದೂ ಅಲ್ಲ

46. ಪಂಚಾಯಿತಿ ರಾಜ್ ಸಂಸ್ಥೆಗೆ ಸಂವಿಧಾನಾತ್ಮಕ ಸ್ಥಾನವನ್ನು ಕೊಡುವ ಸಂವಿಧಾನದ ತಿದ್ದುಪಡಿ

ಎ) 72ನೆಯ ಬಿ) 73ನೆಯ

ಸಿ) 74ನೆಯ ಡಿ) 75ನೆಯ

47. ಈ ಕೆಳಗಿನವುಗಳಲ್ಲಿ ಯಾವುದು ಅಖಿಲ ಭಾರತ ಸೇವೆಗೆ ಹೊರತಾಗಿದೆ?

ಎ) ಭಾರತೀಯ ಆರ್ಥಿಕ ಸೇವೆಗಳು

ಬಿ) ಭಾರತೀಯ ಆಡಳಿತ ಸೇವೆಗಳು

ಸಿ) ಭಾರತೀಯ ಅರಣ್ಯ ಸೇವೆಗಳು

ಡಿ) ಭಾರತೀಯ ಪೊಲೀಸ್ ಸೇವೆಗಳು

48. ಮುಖ್ಯ ಚುನಾವಣಾ ಆಯುಕ್ತರು ಇವರಿಂದ ನಿಯುಕ್ತಿಸಲ್ಪಡುತ್ತಾರೆ

ಎ) ಭಾರತದ ರಾಷ್ಟ್ರಪತಿ

ಬಿ) ಪ್ರಧಾನಮಂತ್ರಿ